VISVESVARAYA TECHNOLOGICAL UNIVERSITY
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"Jnana Sangama", Belagavi - 590 018, Karnataka State, INDIA

Phone : (0831) 2405468
Fax : (0831) 2405467
Email : registrar@vtu.ac.in
website : www.vtu.ac.in

ಪ್ರೊ.ಎ.ಎಸ್.ದೇಶಪಾಂಡೆ ಬಿ.ಇ(ಮೆಕ್), ಎಮ್.ಟೆಕ್., ಪಿಹೆಚ್.ಡಿ.
ಕುಲಸಚಿವರು

ಉಲ್ಲೇಖ ಸಂ. : ವಿತಾವಿ/ಪಿಎಸ್/2020-21/ ದಿನಾಂಕ: 15.04.2020

## ಸುತ್ತೋಲೆ

ವಿಷಯ: ಕೋವಿಡ್-19 (ಕೊರೊನಾ ವೈರಸ್) ಹರಡುವಿಕೆ ನಿಯಂತ್ರಿಸುವ ಹಿನ್ನೆಲೆಯಲ್ಲಿ ರಜೆ ಘೋಷಿಸುವ ಹಾಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು.

ಉಲ್ಲೇಖ:1) ವಿತಾವಿ/ಪಿಎಸ್/2020-21/10686 ದಿನಾಂಕ:23-03-2020.

2) ಮಾನ್ಯ ಕುಲಸಚಿವರ 30-03-2020ರ ಸುತ್ತೋಲೆ

3) ಮಾನ್ಯ ಕುಲಪತಿಗಳು, ವಿತಾವಿ, ಬೆಳಗಾವಿ ಇವರ ಆದೇಶ, ದಿನಾಂಕ:15-04-2020

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ ತಿಳಿಸುವುದೇನೆಂದರೆ, ವಿಶ್ವವ್ಯಾಪಿ ಹರಡಿಕೊಂಡಿರುವ ಕೋವಿಡ್-19 (ಕೊರೊನಾ ವೈರಸ್) ಸಾಮಾಜಿಕವಾಗಿ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟನಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣ, ವಿತಾವಿಯ ಎಲ್ಲ ಪ್ರಾದೇಶಿಕ ಕಚೇರಿಗಳು, ಸ್ನಾತಕೋತ್ತರ ಕೇಂದ್ರಗಳು ಸಂಯೋಜನೆ ಹೊಂದಿದ, ಘಟಕ ಹಾಗೂ ಸ್ವಾಯತ್ತ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿವರ್ಗದವರಿಗೆ ದಿ:14/04/2020 ರವರೆಗೆ ರಜೆಯನ್ನು ಘೋಷಿಸಲಾಗಿತ್ತು. ಆದರೆ ಮಾನ್ಯ ಪ್ರಧಾನಮಂತ್ರಿಗಳ 14/04/2020 ರಂದು ಇನ್ನೂ 19 ದಿನಗಳ ರಾಷ್ಟ್ರೀಯ ಲಾಕ್‌ಡೌನ್ ಘೋಷಿಸಿದ್ದರಿಂದ ರಜೆಯನ್ನು 03/05/2020 ರ ವರೆಗೆ ವಿಸ್ತರಿಸಲಾಗಿದೆ ಹಾಗೂ ಈ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಬೇಕು. ಈ ಅವಧಿಯಲ್ಲಿ ಸಿಬ್ಬಂದಿ ವರ್ಗದವರು ತಮ್ಮ ಕೇಂದ್ರ ಸ್ಥಾನವನ್ನು ಬಿಟ್ಟು ತೆರಳದಂತೆ ಹಾಗೂ ಮನೆಯಿಂದ ಹೊರಬರದಂತೆ ಮತ್ತು ಸಾಮಾಜಿಕ ಅಂತರವನ್ನು ಹಾಗೂ ಶುಚಿತ್ವವನ್ನು ಕಾಪಾಡಿಕೊಳ್ಳಲು ಈ ಮೂಲಕ ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ. ಬೋಧಕ ಸಿಬ್ಬಂದಿಗಳು ಆನ್‌ಲೈನ ಮೂಲಕ ಬೋಧನೆ ಮತ್ತು ಆನ್‌ಲೈನ ಮೂಲಕ ಆಂತರಿಕ ಮೌಲ್ಯಮಾಪನ ಮಾಡಲು ಆದೇಶಿಸಲಾಗಿದೆ. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರ ಸೇವೆ ಅಗತ್ಯಬಿದ್ದಾಗ ಕಡ್ಡಾಯವಾಗಿ ಸೇವೆಗೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕಿಸಲು ಎಲ್ಲ ಸಿಬ್ಬಂದಿವರ್ಗದವರ ಮೊಬೈಲ್ ಸಂಖ್ಯೆ/ಇ-ಮೇಲ್ ವಿಳಾಸ ಗಳನ್ನು ಪ್ರಾಚಾರ್ಯರರು ಪಡೆದುಕೊಳ್ಳಬೇಕು.

Contd....2...

Scanned with CamScanner

ಹೆಚ್ಚಿನ ವಿವರಗಳು ಮತ್ತು ನಿರ್ದಿಷ್ಟ ಸೂಚನೆಗಳು ಯಾವುದಾದರೂ ಇದ್ದರೆ, ಸರ್ಕಾರ ಸೂಚಿಸುವ ನಿರ್ದೇಶನಗಳ ಆಧಾರದ ಮೇಲೆ ಎಲ್ಲರಿಗೂ ತಿಳಿಸಲಾಗುವುದು.

ಮುಂದುವರೆದು, ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರ ಮತ್ತು ಸ್ಥಳೀಯ ಜಿಲ್ಲಾಡಳಿತ ಹೊರಡಿಸುವ ನಿರ್ದೇಶನ ಗಳನ್ನು ಪಾಲಿಸಲು ಸೂಚಿಸಲಾಗಿದೆ.

ಆದೇಶದ ಮೇರೆಗೆ,

15.04.2020.

ಕುಲಸಚಿವರು

ಇವರಿಗೆ,

1) ಪ್ರಾಚಾರ್ಯರು, ವಿ.ತಾ.ವಿ.ಯ ಎಲ್ಲ ಸಂಯೋಜನೆಹೊಂದಿದ, ಘಟಕ ಹಾಗೂ ಸ್ವಾಯತ್ತ ತಾಂತ್ರಿಕ ಮಹಾವಿದ್ಯಾಲಯಗಳು.
2) ಎಲ್ಲ ವಿಭಾಗಗಳ ಚೇರ್‌ಪರಸನ್ಸ್/ಪ್ರೋಗ್ರಾಮ್ ಕೋರ್ಡಿನೇಟರ್ ಸ್ನಾತಕೋತ್ತರ ಕೇಂದ್ರ, ವಿ.ತಾ.ವಿ, ಮುದ್ದೇನಹಳ್ಳಿ, ಬೆಳಗಾವಿ, ಕಲಬುರ್ಗಿ ಮತ್ತು ಮೈಸೂರು.
3) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಧಾನ ಕಛೇರಿಯ ಆವರಣದಲ್ಲಿರುವ ಎಲ್ಲಾ ಕಛೇರಿಗಳ ಮುಖ್ಯಸ್ಥರುಗಳಿಗೆ / ವಿಶೇಷಾಧಿಕಾರಿಗಳಿಗೆ.

ಪ್ರತಿ ಇವರಿಗೆ,

1) ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ.ಯ ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು.
2) ವಿಶೇಷಾಧಿಕಾರಿಗಳು, ಡಿ.ಪಿ.ಎ.ಆರ್, ವಿತಾವಿ, ಬೆಳಗಾವಿ ಮುಂದಿನ ಕ್ರಮಕ್ಕಾಗಿ.
3) ಕುಲಪತಿಗಳ ಕಾರ್ಯದರ್ಶಿಗಳು, ವಿ.ತಾ.ವಿ, ಬೆಳಗಾವಿ.

Scanned with CamScanner